ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1424
ಸದಸ್ಯರ ಹೆಸರು	:	ಶ್ರೀ ಮುನಿರಾಜು ಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	10.03.2022
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿರವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲ ಚಟುವಟಿಕೆಗಳಲ್ಲಿ ನಗರಕ್ಕೆ ಅಭಿವೃದ್ಧಿ ನಕ್ಷೆ ತಯಾರಿಸುವುದು ಪ್ರಥಮವಾಗಿದ್ದು, 2015ನೇ ಸಾಲಿನವರೆಗೆ ಬೆಂಗಳೂರು ಅಭಿವೃದ್ಧಿಯ ರೂಪುರೇಷೆಗಳನ್ನು ಅಂದಾಜಿಸಿ, ಸುಮಾರು ಇಪ್ಪತ್ತು ವರ್ಷಗಳ ಹಿಂದೆ ತಯಾರಿಸಲಾಗಿದ್ದ ಪರಿಷ್ಕೃತ ಮಹಾಯೋಜನೆ 2015 Revised Master Plan-2015 (RMP 2015) ರ ಅವಧಿ ಮುಗಿದು ಆರು ವರ್ಷಗಳೇ ಗತಿಸಿದ್ದರೂ ಬೆಂಗಳೂರು ನಗರಕ್ಕೆ ಒಂದು ಸಮಗ್ರ ಅಭಿವೃದ್ಧಿ ಯೋಜನೆ ನಕ್ಷೆ ಇಲ್ಲದಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಪ್ರಸ್ತುತ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸರ್ಕಾರದಿಂದ / ಖಾಸಗಿಯವರಿಂದ ಕೈಗೊಳ್ಳಲಾಗುತ್ತಿರುವ ಅಭಿವೃದ್ಧಿ ಯೋಜನೆಗಳು ವಸತಿ ಸಮುಚ್ಛಯ / ಬಡಾವಣೆ ನಿರ್ಮಾಣ ಇತ್ಯಾದಿ ಯೋಜನೆಗಳಿಗೆ ಅನುಮೋದನೆ ನೀಡಲು ಆರು ವರ್ಷದ ಹಿಂದೆಯೇ ಅವಧಿ ಮುಗಿದಿರುವ ಆರ್.ಎಂ.ಪಿ–2015ನ್ನೇ ಆಧಾರವಾಗಿ ಪರಿಗಣಿಸಲಾಗುತ್ತಿರುವುದರಿಂದ, ಒಟ್ಟಾರೆ ನಗರದ ಅಭಿವೃದ್ಧಿಯ ಮೇಲೆ ಅನಪೇಕ್ಷಣೀಯ ಪರಿಣಾಮ ಉಂಟಾಗುವ ಸಾಧ್ಯತೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;	RMP-2015 ಈಗಲೂ ಚಾಲ್ತಿಯಲ್ಲಿರುವುದರಿಂದ ಹಾಗೂ RMP-2015 ರೊಂದಿಗೆ ಸಿದ್ಧಪಡಿಸಲಾದ ವಲಯ ನಿಯಮಾವಳಿಗೆ ಕೆಟಿಸಿಪಿ ಕಾಯ್ದೆ 13–ಇ ರಡಿಯಲ್ಲಿ ಅವಶ್ಯಕತೆಗಳಿಗೆ ಹಾಗೂ ಹಾಲಿ ಪರಿಸ್ಥಿತಿಗಳಿಗೆ ಅನುಗುಣವಾಗಿ ಕಾಲಕಾಲಕ್ಕೆ ಅವಶ್ಯವಾದ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಅಭಿವೃದ್ಧಿ ಯೋಜನೆಗಳು / ವಸತಿ ಸಮುಚ್ಛಯ / ಬಡಾವಣೆ ನಿರ್ಮಾಣ ಇತ್ಯಾದಿ ಯೋಜನೆಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ನೀಡಲಾಗುತ್ತಿದೆ.
ಇ)	ಹಾಗಿದ್ದಲ್ಲಿ, ಬೆಂಗಳೂರು ನಗರದ ಬೆಳವಣಿಗೆಯು ವ್ಯವಸ್ಥಿತ ರೀತಿಯಲ್ಲಿ ಆಗುವಂತೆ ಮಾಡಲು ಅವಶ್ಯಕವಾದ ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಿದ್ದಪಡಿಸಿದ್ದ RMP-2031 ಕ್ಕೆ ಸರ್ಕಾರದ ಆದೇಶ ಸಂಖ್ಯೆ ನಅಇ 516 ಬೆಂಆಸೇ 2017, ದಿನಾಂಕ 22.11.2017 ರಂದು ಕೆಲವು ಷರತ್ತಿಗೊಳಪಟ್ಟು ಕೆಟಿಸಿಪಿ ಕಾಯ್ದೆ ಕಲಂ 13 ರಡಿಯಲ್ಲಿ ಸರ್ಕಾರದಿಂದ ತಾತ್ಕಾಲಿಕ ಅನುಮೋದನೆ ನೀಡಲಾಗಿತ್ತು. ತದನಂತರ ಮಹಾಯೋಜನೆಯನ್ನು ದಿನಾಂಕ 17.01.2019 ರಂದು ಅಂತಿಮ ಅನುಮೋದನೆಗಾಗಿ ಪ್ರಾಧಿಕಾರದಿಂದ ಪ್ರಸ್ತಾವನೆ ಸ್ವೀಕೃತವಾಗಿತ್ತು.

..2ಕ್ಕೆ

		ಸರ್ಕಾರದ ಆದೇಶ ಸಂಖ್ಯೆ:ನಅಇ 516 ಬೆಂಆಸೇ 2017, ದಿನಾಂಕ:22.06.2020 ರಲ್ಲಿ ಈ ಹಿಂದೆ ನೀಡಲಾಗಿದ್ದ ತಾತ್ಕಾಲಿಕ ಅನುಮೋದನೆಯನ್ನು ಹಿಂಪಡೆಯಲಾಗಿದ್ದು, ಉದ್ದೇಶಿತ ಮಹಾಯೋಜನೆಯಲ್ಲಿ ಕೆಲವು ಬದಲಾವಣೆಗಳನ್ನು ಅಳವಡಿಸಿಕೊಂಡು ಹೊಸದಾಗಿ ಪ್ರಸ್ತಾವನೆ ಸಲ್ಲಿಸುವಂತೆ ಪ್ರಾಧಿಕಾರಕ್ಕೆ ಸೂಚಿಸಲಾಗಿದೆ. ದಿನಾಂಕ:20.12.2021 ರಂದು ಮಹಾಯೋಜನೆ ತಯಾರಿಕೆ ಸಂಬಂಧ ಸಮಾಲೋಚಕ ಸಂಸ್ಥೆಯನ್ನು ಆಯ್ಕೆ ಮಾಡಲು ಜಾಗತಿಕ ಟೆಂಡರ್ ಕರೆಯಲಾಗಿದ್ದು, ದಿನಾಂಕ 15.02.2022 ರಂದು ಸದರಿ ಟೆಂಡರ್‌ನ್ನು ತೆರೆಯಲಾಗಿದ್ದು, ಯಾವುದೇ ಸಂಸ್ಥೆಯು ಬಿಡ್ ಸಲ್ಲಿಸಿರುವುದಿಲ್ಲ. ಈ ಸಂಬಂಧ ಮತ್ತೊಮ್ಮೆ ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ನಅಇ 70 ಬೆಂಆಸೇ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ